ಶ್ರೀ ಎಸ್. ಕರಿಯಪ್ಪ.—ಈಗಾಗಲೇ ಜನವರಿಂದ ಆಯಾ ತಾಲ್ಲೂಕುಗಳಿಂದ ತೀರ್ಮಾನವಾಗಿ ಬಂದಿರತಕ್ಕಂಥ ಮತ್ತು ಸರ್ಕಾರಕ್ಕೆ ಅರ್ಜಿಯ ಮೂಲಕ ಅರಿಕೆ ಮಾಡಿಕೊಂಡಿರತಕ್ಕಂಥ ಎಲ್ಲಾ ಕೆಲಸಗಳನ್ನೂ ಈ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವಿರಾ ?

ಶ್ರೀ ಕೆ. ಹನುಮಂತಯ್ಯ.—ಹಾಗೆ ತೀರ್ಮಾನವಾಗಿ ಬರತಕ್ಕಂಥ ಎಲ್ಲಾ ವಿಷಯಗಳನ್ನೂ ಕೈಗೊಳ್ಳಬೇಕೆಂದರೆ ಬಹಳ ಕಷ್ಟಕ್ಕೆ ಬರುತ್ತದೆ. ಎಷ್ಟೆಷ್ಟು ಸಾಧ್ಯವೋ ಅಷ್ಟನ್ನು ಆಯಾ ಜಿಲ್ಲೆಗಳನ್ನು ನೋಡಿಕೊಂಡು ಆ ಕೆಲಸಗಳನ್ನು ಪಟ್ಟಿಗೆ ಸೇರಿಸಲಾಗುತ್ತದೆ.

ಶ್ರೀ ಎಸ್. ಕರಿಯಪ್ಪ.—ಹಾಗೆ ಎಲ್ಲಾ ಕೆಲಸಗಳನ್ನೂ ಸೇರಿಸಿದ್ದರೂ ಹೋಗಲಿ, ಬಹಳ ಹಿಂದುಳಿದಿರುವ ತಾಲ್ಲೂಕುಗಳಿಂದ ಬಂದಿರತಕ್ಕ ವಿಷಯಗಳಿಗಾದರೂ ತಾವು ಹೆಚ್ಚು ಗಮನ ಕೊಡುವಿರಾ ?

ಶ್ರೀ ಕೆ. ಹನುಮಂತಯ್ಯ.—ಆಲೋಚನೆ ಮಾಡೋಣ.

ಶ್ರೀ ಕೆ. ಜಿ. ತಿಮ್ಮೇಗೌಡ.—ಈ ಪಂಚವಾರ್ಷಿಕ ಯೋಜನೆಯಲ್ಲಿ ಚನ್ನಪಟ್ಟಣ ತಾಲ್ಲೂಕಿನಲ್ಲಿ ಯಾವ ಕೆಲಸಗಳನ್ನು ಸೇರಿಸಿದ್ದೀರಿ ?

*ಶ್ರೀ ಕೆ. ಹನುಮಂತಯ್ಯ.—ಚನ್ನಪಟ್ಟಣ ತಾಲ್ಲೂಕಿನಲ್ಲಿ ಯಾವ ಕೆಲಸಗಳನ್ನೂ ಸೇರಿಸಿರುವಂತೆ ಕಾಣುವುದಿಲ್ಲ.

ಶ್ರೀ ಕೆ. ಜಿ. ತಿಮ್ಮೇಗೌಡ.—ತಾವು ಉತ್ತರದಲ್ಲಿ "ಚನ್ನಪಟ್ಟಣ, ಕಾಕಾನಹಳ್ಳಿ ಮತ್ತು ರಾಮನಗರಂ ಮುಂತಾದ ಕಡೆಗಳಲ್ಲಿ" ಎಂಬುದಾಗಿ ಹೇಳಿದ್ದೀರಲ್ಲಾ !

ಶ್ರೀ ಕೆ. ಹನುಮಂತಯ್ಯ.—ಆ ಕೆಲಸಗಳ ಪೈಕಿ ಕೆಲವು ಆ ಎರಡು ತಾಲ್ಲೂಕುಗಳಿಗೂ ಅನ್ವಯಿಸುವ ಹಾಗೆ ಇರುವುದರಿಂದ ಹಾಗೆ ಉತ್ತರ ಕೊಡಲಾಗಿದೆ.

———

Karnataka Ekikarana.

Q.—116. Sri K. LAKKAPPA (Channarayapatna).—

Will the Government be pleased to state :—

(*a*) whether they have received report from the Fact Finding Committee appointed by them regarding Karnataka Ekikarana ;

(*b*) whether they submitted their opinion in the matter to the States Reorganisation Committee ?

A.—Sri K. HANUMANTHAIYA (Chief Minister).—

(*a*) Yes.

(*b*) No.

ಶ್ರೀ ಕೆ. ಲಕ್ಕಪ್ಪ.—ಆಂಕಿ ಅಂಶಗಳ ಪರಿಶೀಲನಾ ಸಮಿತಿಯ ವರದಿ ತಮ್ಮ ಕೈ ಸೇರಿ ಎಷ್ಟು ದಿವಸಗಳಾದವು ?

Mr. SPEAKER.—That has already been distributed.

Sri K. LAKKAPPA.—I want to know when the Report was submitted to the Government.

Sri K. HANUMANTHAIYA.—I don't remember the date. It was submitted two or three months back.

ಶ್ರೀ ಕೆ. ಲಕ್ಕಪ್ಪ.—ಈ ಆಂಕಿ ಅಂಶಗಳ ಸಮಿತಿಯು ಒಪ್ಪಿಸಿರುವ ವರದಿಯ ಮೇಲೆ ಚರ್ಚೆ ನಡೆಸುವುದಕ್ಕಾಗಿ ತಾವು ಎರಡು ದಿನಗಳ ಕಾಲಾವಕಾಶವನ್ನು ಗೊತ್ತುಮಾಡಿದ್ದೀರಿ, ಆದರೆ ತಾವು ಸದಸ್ಯರಿಂದ ಅವರವರ ಅಭಿಪ್ರಾಯಗಳನ್ನು ಪಡೆಯುತ್ತೀರೋ ಅಥವಾ ಅವರುಗಳಿಂದ ಅಭಿಮತವನ್ನೇ ಪಡೆಯುತ್ತೀರೋ ?

Mr. SPEAKER.—That statement will perhaps be made on the day when the relevant motion is moved. I think we need not waste time on that now.

Sri K. LAKKAPPA.—I want to know whether the motion will be moved or not—whether they will lay on the Table the decision or take the concensus of opinion of the members of the Assembly.

ಶ್ರೀ ಕೆ. ಹನುಮಂತಯ್ಯ.—ಆ ತೀರ್ಮಾನವನ್ನೂ ಸಭೆಯ ಅಭಿಪ್ರಾಯಕ್ಕೇ ಬಿಟ್ಟುಬಿಡುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಇದರ ಬಗ್ಗೆ ಸರ್ಕಾರದವರು ತಮ್ಮ ಅಭಿಪ್ರಾಯವನ್ನು ಸ್ಟೇಟ್ಸ್ ರೀಆರ್ಗನೈಜೇಷನ್ ಸಮಿತಿಯವರಿಗೆ ಒಪ್ಪಿಸುವ ಮೊದಲು, ಇದರ ಬಗ್ಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಸದಸ್ಯರ ಅಭಿಪ್ರಾಯವನ್ನು ಪಡೆಯಲು ಅವಕಾಶವಿದೆಯೇ ?

Sri K. HANUMANTHAIYA.—That does not arise.

ಶ್ರೀ ಕೆ. ಲಕ್ಕಪ್ಪ.—ಅನೇಕ ವ್ಯಕ್ತಿಗಳೂ ಮತ್ತು ವರ್ತಮಾನ ಪತ್ರಿಕಾ ಕರ್ತರುಗಳೂ, ಮತ್ತು ಪತ್ರಿಕೆಯಲ್ಲಿನ ನುಡಿಗಳೂ ಈ ಸಮಿತಿ ವರದಿಯು ಆಂಕಿ ಅಂಶಗಳೂ ಏಕೀಕರಣಕ್ಕೆ ಅನುಕೂಲವಾಗಿಲ್ಲವೆಂದು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Mr. SPEAKER.—That can be debated upon when discussion takes place.

Sri K. LAKKAPPA.—Are you aware that many people have expressed that the opinion of the Committee is not favourable for unification of Karnataka ?

Sri K. HANUMANTHAIYA.—Whether I am or I am not aware is a different question ; but so far as the Government are concerned, they are not aware because we have not received any communication.

Sri J. MOHAMED IMAM.—I rise to a point of order, whether a member can refer to matters which are outside the cognizance or purview of this House and which we cannot either contradict or support.

Mr. SPEAKER.—That point will be considered and I will give a ruling later.

ಶ್ರೀ ಕೆ. ಲಕ್ಕಪ್ಪ.—ಕೂಡಲೇ ತಮ್ಮ ಅಭಿಪ್ರಾಯ ತಿಳಿಸಬೇಕೆಂದು ಸ್ಟ್ರೇಟ್ಸ್ ರೀಆರ್ಗನೈಜೇಷನ್ ಸಮಿತಿಯವರಿಂದ ತಮಗೆ ಪತ್ರ ಬಂದಿದೆಯೇ ?

ಶ್ರೀ ಕೆ. ಹನುಮಂತಯ್ಯ.—ಏನೂ ಬಂದಿಲ್ಲ.

Taluk Boards (Constitution).

Q.—35. Sri K. LAKKAPPA (Channarayapatna).—

Will the Government be pleased to state :—

(*a*) whether they have decided to constitute Taluk Boards ;

(*b*) If so, when are they going to constitute them ?

A.—Sri T. CHANNIAH (Minister for Public Health and Local Self-Government).—

(*a*) No.

(*b*) Does not arise.

ಶ್ರೀ ಕೆ. ಲಕ್ಕಪ್ಪ.—ತಾಲ್ಲೂಕು ಬೋರ್ಡುಗಳನ್ನು ನೇಮಕ ಮಾಡಬೇಕೆಂಬ ಆಲೋಚನೆ ತಮಗಿದೆಯೋ ಅಥವಾ ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಗಳನ್ನು ನೇಮಕಮಾಡಬೇಕೆಂಬ ಆಲೋಚನೆ ತಮಗಿದೆಯೋ ?

Sri T. CHANNIAH.—The matter is under the consideration of the Government.

ಶ್ರೀ ಕೆ. ಲಕ್ಕಪ್ಪ.—ತಾವು ಈಗ ಹೇಳಿರುವ ಪ್ರಕಾರ . . .

Mr. SPEAKER.—That has been stated in the Address delivered by the Rajpramukh.

ಶ್ರೀ ಕೆ ಲಕ್ಕಪ್ಪ.—ಈ ತಾಲ್ಲೂಕು ಬೋರ್ಡುಗಳನ್ನಾಗಲಿ ಅಥವಾ ಈ ಡೆವಲಪ್‌ಮೆಂಟ್ ಬೋರ್ಡುಗಳನ್ನಾಗಲೀ ತಾವು ಏರ್ಪಾಡು ಮಾಡುವಾಗ ಆಯಾ ಸ್ಥಳದಲ್ಲಿರತಕ್ಕ ಶಾಸನ ಸಭಾ ಸದಸ್ಯರುಗಳೊಡನೆ ಸಮಾಲೋಚನೆ ಮಾಡಿ ಅವುಗಳನ್ನು ರಚನೆಮಾಡುತ್ತೀರಾ ?

Sri K. HANUMANTHAIYA.—We will consult all possible persons that deserve to be consulted.

ಶ್ರೀ ಕೆ. ಲಕ್ಕಪ್ಪ.—ಈ ನಮೂನೆಗಳನ್ನು ನೇಮಕ ಮಾಡುವಾಗ ಖಾನಗಿಯವರ ಮೂಲಕ ಅದನ್ನು ಮಾಡುತ್ತೀರೋ ಅಥವಾ ಅಧಿಕಾರಿಗಳ ಮೂಲಕವಾಗಿ ಅದನ್ನು ಮಾಡುತ್ತಿರೋ ?

Sri K. HANUMANTHAIYA.—That is still under consideration.

ಶ್ರೀ ಕೆ. ಲಕ್ಕಪ್ಪ.—ಯಾವ ಯಾವ ಬಾಬುಗಳಿಂದ ಇದಕ್ಕೆ ಉತ್ತತ್ತಿ ಬರುವಂತೆ ಮಾಡಿದ್ದೀರಿ ?

Sri K. HANUMANTHAIYA.—Those proposals also will be placed before the House very soon.

Sri K. PUTTASWAMY.—The Minister for L. S. G. was pleased to state that the constitution of Taluk Development Boards is under the consideration of the Government. I just want to know whether it is under the consideration of the Government or whether the Government have decided . . .

Sri T. CHANNIAH.—The Government have not taken a final decision about the constitution of Taluk Development Committees. The question will be placed before this House in due course for their consideration and approval.

Sri K. PUTTASWAMY.—Sir, in the address delivered by the Rajpramukh, it was stated that the Government has decided to set up Taluk Development Committees ?

Sri Kadidal MANJAPPA.—The proposal is to be placed before the House shortly.

Sri B. NARAYANASWAMY.—I want to put a question.

Mr SPEAKER.—That question can be taken up during the debate on the Motion of Thanks.